ಸಂಜೆಗೆ ಕಾಡಿನ ದಾರಿಯಲ್ಲಿ ಹಿಂತಿರುಗಿ ಬರುತ್ತಿದ್ದ ಪಶುಪಾಲಕನಿಗೆ ಹುಲಿಯ ವಿಕಟ ಗರ್ಜನೆ ಕೇಳಿ ಗಾಬರಿಯಾಯಿತು. ಏನೋ ಅನಾಹುತವಾಗಿದೆ ಎಂದು ಅವನು ಊಹಿಸಿದ. ಹೆಂಡತಿ ಮಕ್ಕಳನ್ನು ಅದರ ದಾರಿಯಿಂದ ಹಿಂದೆ ಕಳಿಸಿದ. ಆತಂಕದಿಂದಲೇ ರೊಪ್ಪದ ಹತ್ತಿರ ಓಡೋಡಿ ಬಂದ. ಹುಲಿಮರಿಗಳು ಸತ್ತು ಬಿದ್ದಿದ್ದವು. ಹುಲಿ ಭೂಮಿಯೇ ನಡುಗುವಂತೆ ಅಬ್ಬರಿಸುತ್ತಾ ತನ್ನ ಕಣ್ಣುಗಳಿಂದ ಬೆಂಕಿಯನ್ನೇ ಚೆಲ್ಲುತ್ತಿತ್ತು. ಪಶುಪಾಲಕ ಏನೂ ತೋಚದವನಾಗಿ ಗರಬಡಿದಂತೆ ನಿಂತುಬಿಟ್ಟ. ಆಗ ಹುಲಿ ನೋವು ಮತ್ತು ಆಕ್ರೋಶ ಎರಡನ್ನು ತುಂಬಿಕೊಂಡು ಪಶುಪಾಲಕನನ್ನು, 'ನೀವು ಮನುಷ್ಯರೇ ಹೀಗೆ, ನಂಬಿಕೆಗೆ ಅರ್ಹರಲ್ಲ. ನೀವು ಹುಲಿಯನ್ನು ಕ್ರೂರಿ ಎಂದು ಕರೆಯುತ್ತೀರಿ, ಆದರೆ, ಮನುಷ್ಯರಿಗಿಂತ ಕ್ರೂರಿಗಳು ಬೇರೆ ಯಾರೂ ಇಲ್ಲ. ನೀನು ಮಾತಿಗೆ ತಪ್ಪಿ, ಒಪ್ಪಂದವನ್ನು ಮರೆತು ನನ್ನ ಮರಿಗಳನ್ನು ಹತ್ಯೆ ಮಾಡಿದ್ದೀಯ. ಏನೂ ಅರಿಯದ ಮುಗ್ಧ ಕಂದಮ್ಮಗಳನ್ನು ಕೊಂದಿದ್ದೀಯ. ಈ ನಿನ್ನ ಪಾಪಕ್ಕೆ ಏನು ಮಾಡಬೇಕು?' ಎಂದು ಪ್ರಶ್ನಿಸಿತು. ಪಶುಪಾಲಕ, 'ಇದು ತನ್ನ ಕೃತ್ಯವಲ್ಲ. ಇದರಲ್ಲಿ ತನ್ನದೇನೂ ತಪ್ಪಿಲ್ಲ, ಯಾರೋ ಹೊರಗಿನವರು ಮಾಡಿದ್ದಾರೆ. ಪ್ರತ್ಯಕ್ಷವಾಗಿ ಕಂಡದ್ದನ್ನು ಪ್ರಮಾಣಿಸಿ ನೋಡಬೇಕಂತೆ, ತಾಳ್ಮೆಯಿಂದ ಯೋಚಿಸು' ಎಂದು ಕೇಳಿಕೊಂಡ. ಆದರೆ, ಹುಲಿ ಮತ್ತೊಮ್ಮೆ ಮನುಷ್ಯರನ್ನು ನಂಬಲು ಸಿದ್ಧವಿರಲಿಲ್ಲ. ಆದರೂ ಅದು ಹೀಗೆ ಹೇಳಿತು: 'ನೋಡು ಮನುಷ್ಯನೇ, ನಾನು ಮನಸ್ಸು ಮಾಡಿದರೆ ನಿನ್ನ ಈ ಎಲ್ಲ ಕರುಗಳನ್ನು ಒಂದೇ ಏಟಿಗೆ ಕೊಲ್ಲಬಲ್ಲೆ. ಆದರೆ, ಕಂದಮ್ಮಗಳನ್ನು ಕೊಲ್ಲುವ ಪಾಪ ಕೃತ್ಯವನ್ನು ನಾನು ಮಾಡುವುದಿಲ್ಲ. ನಿನ್ನನ್ನು ಮಾತ್ರ ಯಾವ ಕಾರಣಕ್ಕೂ ಬಿಡುವುದಿಲ್ಲ. ನಿನ್ನ ಸಾವಿನ ನಂತರ ನಿನ್ನ ಹಸುಗಳನ್ನು ಕೊಂದು ತಿನ್ನುತ್ತೇನೆ' ಎಂದು ಹೂಂಕರಿಸುತ್ತಾ ಅವನತ್ತ ಮುನ್ನುಗ್ಗಿತು. ಪಶುಪಾಲಕ ಏನು ಹೇಳ ಹೋದರೂ ಅದು ಕೇಳುವ ಸ್ಥಿತಿಯಲ್ಲಿರಲಿಲ್ಲ. ತಾನು ಸತ್ತರೂ ಸರಿಯೇ ತನ್ನ ಹಸುಗಳನ್ನು ಕಾಪಾಡಬೇಕು ಎಂದು ಅವನೂ ನಿರ್ಧರಿಸಿದ. ಒಂದು ಕಡೆ ಆರ್ಭಟಿಸುವ ಹೆಬ್ಬುಲಿ. ಇನ್ನೊಂದು ಕಡೆ ಜಗಜಟ್ಟಿಯಂಥ ಶಕ್ತಿಯುಳ್ಳ ಪಶುಪಾಲಕ. ಇಬ್ಬರ ನಡುವೆ ಏಳು ಹಗಲು ಏಳು ರಾತ್ರಿ ಘೋರ ಯುದ್ಧ ನಡೆಯಿತು. ಯುದ್ಧ ಮಾಡಿ ಮಾಡಿ ಇಬ್ಬರೂ ಸುಸ್ತಾಗಿ ಹೋದರು. ಸಮಬಲದ ಈರ್ವರೂ ಸಾಯುವವರೆಗೂ ಸ್ವಾಭಿಮಾನವನ್ನು ಬಿಟ್ಟುಕೊಡಲಿಲ್ಲ. ಏಳನೆಯ ದಿನ ಸಂಜೆ ಸೂರ್ಯ ಮುಳುಗುವ ಸಮಯದಲ್ಲಿ ಹುಲಿ ಒಂದು ಕಡೆ ಸತ್ತು ಬಿದ್ದಿತು. ಮರು ಕ್ಷಣದಲ್ಲಿ ಇನ್ನೊಂದು ಕಡೆ ಪಶುಪಾಲಕನೂ ಸತ್ತು ಬಿದ್ದ!


**ಹಿ.ಚಿ. ಬೋರಲಿಂಗಯ್ಯ**

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವರಾಗಿ, ಲಲಿತಕಲಾ ನಿಕಾಯ ಮತ್ತು ಸಮಾಜ ವಿಜ್ಞಾನಗಳ ನಿಕಾಯದ ಡೀನ್ ಆಗಿ ಅಪಾರ ಆಡಳಿತಾತ್ಮಕ ಅನುಭವ ಇರುವ ಬೋರಲಿಂಗಯ್ಯ ಜಾನಪದ ವಿದ್ವಾಂಸರಾಗಿ ಮಹತ್ವದ ಕೆಲಸಗಳನ್ನು ಮಾಡಿದ್ದಾರೆ. 25ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಅವರು ಇಟಲಿ, ಫ್ರಾನ್ಸ್, ಹಾಲೆಂಡ್ ಮತ್ತು ಇರಾನ್‌ನ ರಾಜಧಾನಿ ಟೆಹರಾನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಗೊಂಬೆಯಾಟ ಉತ್ಸವಗಳಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಬೋರಲಿಂಗಯ್ಯ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹಿತ್ತಲಪುರ ಗ್ರಾಮದವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.